ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ವಿಭಾಗ
ಜಿ.ಕೆ.ವಿ.ಕೆ., ಬೆಂಗಳೂರು–560065
* ಸಮಗ್ರ ಕೃಷಿ ಹವಾಮಾನ ವರದಿ ಪತ್ರಿಕೆ *

ದಿನಾಂಕ: 05-07-2013

ಕೋಲಾರ ಜಿಲ್ಲೆಗೆ ಸೀಮಿತವಾಗಿದೆ

ಈ ವಾರದ ಮುನ್ಸೂಚನೆ (ದಿನಾಂಕ 06.07.13 – 10.07.13 ವರೆಗೆ)

	06.07.13	07.07.13	08.07.13	09.07.13	10.07.13
ಮಳೆ (ಮಿ ಮಿ)	1	2	1	2	1
ಗರಿಷ್ಠ ಉಷ್ಣಾಂಶ(ಡಿ.ಸೆ.)	30	29	28	29	28
ಕನಿಷ್ಠ ಉಷ್ಣಾಂಶ (ಡಿ.ಸೆ.)	21	20	20	20	20
ಮೋಡ (ಪ್ರಮಾಣ)	85	6	5	6	6
ಅರ್ದ್ರತೆ ೭.೨೦ ಬೆ (ಶೇ)	80	83	82	80	82
ಅರ್ದ್ರತೆ ೨.೨೦ ಮ (ಶೇ)	64	62	65	64	66
ಗಾಳಿಯ ವೇಗ (ಕಿ.ಮಿ/ಗಂಟೆಗೆ)	6	7	7	6	7
ಗಾಳಿಯ ದಿಕ್ಕು (ಡಿಗ್ರಿ)	270	270	270	270	270

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ನಾಲ್ಕು ದಿನಗಳಲ್ಲಿ ಆಕಾಶದಲ್ಲಿ ಮೋಡಕವಿದ ವಾತವರಣವಿದ್ದು , ಅಲ್ಲಲ್ಲಿ ತುಂತುರು ಮಳೆಯಾಗುವ ಸಂಭವವಿರುತ್ತದೆ. ದಿನದ ಗರಿಷ್ಠ ಉಷ್ಣಾಂಶ 28.0-30.0°C ಮತ್ತು ಕನಿಷ್ಠ 20.0–21.0°C ಇರುವ ಸಾಧ್ಯತೆ ಇದೆ. ಬೆಳಿಗಿನ ಅರ್ದ್ರತೆ ಪ್ರಮಾಣ ಶೇ 80-83 % ಇದ್ದು ಮಧ್ಯಹಾನ 62-66 % ಇರುವುದು ಮತ್ತು ಗಾಳಿಯು ನೈರುತಯ ದಿಕ್ಕಿನಿಂದ ಗಂಟೆಗೆ ಸರಾಸರಿ 6-7 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಖುಷ್ಕಿ ಜಮೀನಿನಲ್ಲಿ ಬದು ಮತ್ತು ಬಸಿಗಾಲುವೆಗಳನ್ನು ಸ್ವಚ್ಛ ಮಾಡುವುದು ಹಾಗು ಕೃಷಿ ಹೊಂಡಗಳನ್ನು ದುರಸ್ತಿಗೊಳಿಸಿ ನೀರು ನಿಧಾನವಾಗಿ ಹರಿಯುವಂತೆ ಮಾಡುವುದು ಮಣ್ಣಿನ ಸವಕಳಿ ತಪ್ಪಿಸಿ ಹಾಗು ಮಣ್ಣಿನ ಸಂರಕ್ಷಣೆ ಮಾಡುವುದು

ಸಸಿ ಮಡಿ ತಯಾರಿಕೆ:

ನೀರಾವರಿ ಸೌಲಭ್ಯವಿರುವ ಭಾಗಗಲಲ್ಲಿ ಮುಂಗಾರು ಬೆಳೆಗಳಾದ ಭತ್ತ ಮತ್ತು ರಾಗಿಯ ಸಸಿ ಮಡಿಗಳನ್ನು ಬೆಳೆಸುವುದಕ್ಕೆ ಇದು ಸೂಕ್ತ ಕಾಲ. ಮುಂಗಾರು ಬಿತ್ತನೆ ಮಾಡುವ ಭೂಮಿಯನ್ನು ಆಳವಾದ ಉಳುಮೆ ಮಾಡಿ ಇದರಿಂದ ಭೂಮಿಯಲ್ಲಿನ ಕೀಟಗಳ ಮೊಟ್ಟೆ ಮತ್ತು ಕೋಶಗಳು ನಾಶವಾಗುತ್ತವೆ ಮತ್ತು ಕಳೆಗಳು ನಾಶವಾಗುತ್ತವೆ.

ಸಾಮಾನ್ಯ ಸೂಚನೆಗಳು ಮತ್ತು ಮುಂಗಾರು ಬೆಳೆಗಳು :

- ಭೂಮಿಯಲ್ಲಿ ತೇವಾಂಶದ ಆದಾರದ ಮೇಲೆ ಬಿತ್ತನೆ ಮಾಡಿ. ಜಿಲ್ಲೆಯ ಕೆಲವು ಭಾಗಗಳಲ್ಲಿ ಮಳೆಯು ಕಡಿಮೆಯಾಗಿರುವುದರಿಂದ ತೇವಾಂಶವು ಕಡಿಮೆಯಾಗಿ ಬಿತ್ತನೆ ಕಾರ್ಯಕ್ರಮ ಪ್ರಾರಂಭವಾಗಿಲ್ಲ.
- ಹೀಗಾಗಲೆ ಕೆಲವು ಭಾಗಗಳಲ್ಲಿ ಮುಂಗಾರು ಮಳೆ ಪ್ರಾರಂಭವಾಗಿರುವುದರಿಂದ ಬಿತ್ತನೆ ಕಾರ್ಯ ಪ್ರಾರಂಭವಾಗಿದ್ದು, ಬಿತ್ತನೆ ಬೀಜಗಳನ್ನು ಹತ್ತಿರದ ಕೃಷಿ ವಿಜ್ಞಾನ ಕೇಂದ್ರ/ ಕೃಷಿ ವಿಶ್ವ ವಿದ್ಯಾನಿಲಯ/ರೈತ ಸಂಪರ್ಕ ಕೇಂದ್ರ ಗಳಿಂದ ಪಡೆದು ಮಣ್ಣಿನಲ್ಲಿ ತೇವಾಂಶದ ಆದಾರದ ಮೇಲೆ ಬಿತ್ತನೆ ಕಾರ್ಯಕ್ರಮವನ್ನು ಪ್ರಾರಂಭ ಮಾಡಿ ಹಾಗು ತಮ್ಮಲ್ಲಿ ಇರುವ ಬಿತ್ತನೆ ಬೀಜಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಿ ಮೊಳಕೆ ಪ್ರಮಾಣ ಪರೀಕ್ಷೆ ಮಾಡಿಸಿ.
- ಬಿತ್ತನೆಗೆ ಮೊದಲು ಸಾವಯವ ಗೊಬ್ಬರವನ್ನು ಭೂಮಿಗೆ ಸೇರಿಸುವುದು ಹಾಗು ಭೂಮಿಯನ್ನು ಹಲುಬೆ(Spike tooth harrow)ಯಿಂದ ಮಟ್ಟಮಾಡಿ ಬಿತ್ತನೆಗೆ ಹದಮಾಡಿಕೊಳ್ಳುವುದು.

ಗುಲಾಬಿ: ಕಪ್ಪು ಚುಕ್ಕೆ ರೋಗದ ನಿರ್ವಹಣೆ:

ಮಳೆಯಾಗಿರುವುದರಿಂದ ನೀರನ್ನು ಹಾಯಿಸಲು ಹೋಗಬೇಡಿ, ಯೂರಿಯಾ ವನ್ನು ಅಗತ್ಯಕ್ಕಿಂತ ಹೆಚ್ಚು ಹಾಕಬೇಡಿ.

- ✓ **ಮೇಲಿಂದ ಮೇಲೆ ನೀರು ಕೊಡುವುದನ್ನು ಕಡಿಮೆ ಮಾಡಿ.**
- ✓ **ರೋಗದಿಂದ ಪೀಡಿತವಾಗಿರುವ ಎಲೆಗಳನ್ನು ಆಯ್ದುಕೊಂಡು ನಾಶಪಡಿಸಬೇಕು.**
- ✓ **ರೋಗ ತೀವ್ರವಾಗಿದ್ದಲ್ಲಿ ಶಿಲೀಂಧ್ರನಾಶಕಗಳಾದ ಮ್ಯಾಂಕೊಜೆಬ್ ಅಥವಾ ಕ್ಲೋರೊತ್ಯಾಲೊನಿಲ್ ಅನ್ನು ಸಿಂಪಡಿಸಬೇಕು**

ಟೊಮ್ಯಾಟೊ: ಥ್ರಿಪ್ಸ್ ನಿಂದ ಹರಡುವ ವೈರಸ್ ರೋಗಗಳು ಹೆಚ್ಚಾಗಿರುವುದರಿಂದ ಥ್ರಿಪ್ಸ್ ನುಸಿ0ಯ ಹಾವಳಿ0ಯನ್ನು ತಡೆಗಟ್ಟುವುದು ಅತ್ಯವಶ್ಯಕ. ಥ್ರಿಪ್ಸ್ ತಡೆಗಟ್ಟಲು ಅಸಿಟೆಮಾಪ್ರಿಡ್ ಅಥವಾ ಇಮಿಡಾಕ್ಲೋಪ್ರಿಡ್ ಅನ್ನು ಸಿಂಪಡಿಸಬೇಕು.
ಟೊಮ್ಯಾಟೊ ಬೆಳೆ0ಯಲ್ಲಿ ಬ್ಯಾಕ್ಟೀರಿ0ಯಾದಿಂದ ಬರುವ ಸೊರಗು ರೋಗವು ಪ್ರಮುಖವಾಗಿರುವುದು ಕಂಡುಬಂದಿದೆ.
ಸೊರಗು ರೋಗದ ಹತೋಟಿ ಕ್ರಮಗಳು: ಬೇಸಿಗೆ0ಯಲ್ಲಿ ಭೂಮಿ0ಯನ್ನು ಚೆನ್ನಾಗಿ ಉಳುಮೆ ಮಾಡಬೇಕು, ಬೆಳೆ ಪರಿವರ್ತನೆ ಮಾಡಬೇಕು (ಟೊಮ್ಯಾಟೊ ನಂತರ ಏಕದಳ ಧಾನ್ಯ ಬೆಳೆಗಳನ್ನು ಬೆಳೆಯಿರಿ).ನೀರು ಜಮೀನಿನಲ್ಲಿ ನಿಲ್ಲದಂತೆ ನೋಡಿಕೊಳ್ಳಿ. ನೂರು ಕೆ.ಜಿ. ಕೊಟ್ಟಿಗೆ ಗೊಬ್ಬರಕ್ಕೆ ಒಂದು ಕೆ.ಜಿ. ಟ್ರೈಕೋಡರ್ಮ ಜೈವಿಕ ಗೊಬ್ಬರವನ್ನು ಬೆರೆಸಿ ಒಂದು ತಿಂಗಳು ಬಿಡಬೇಕು. ಈ ಗೊಬ್ಬರವನ್ನು ನಾಟಿ0ಯ ಮುನ್ನ ಜಮೀನಿಗೆ ಬೆರೆಸಬೇಕು. ಸ್ಟ್ರೆಪ್ಟೋಸೈಕ್ಲಿನ್ (0.5ಮಿ ಲೀ + ತಾಮ್ರದ ಆಕ್ಸಿ ಕ್ಲೋರೈಡ್ 2 ಮಿ ಆ ಪ್ರತಿ ಲೀಟರ್ ನೀರಿಗೆ ಅನ್ನು ರೋಗ ಪೀಡಿತ ಗಿಡಗಳ ಸುತ್ತ ಮಣ್ಣಿಗೆ ಸೇರಿಸುವುದರಿಂದ.

ತೋಟಗಾರಿಗೆ ಬೆಳೆಗಳು:

- ಕೆಲವು ಭಾಗಗಳಲ್ಲಿ ಮುಂಗಾರು ಮಳೆಯು ಉತ್ತಮವಾಗಿ ಪ್ರಾರಂಭವಾಗಿರುವುದರಿಂದ ತೋಟಗಾರಿಕೆ ಬೆಳೆಗಳಾದ ಮಾವು, ಸಪೋಟ, ತೆಂಗು, ಬಾಳೆ ಹಾಗು ಪಪಾಯ ಗಿಡಗಳನ್ನು ನಾಟಿ ಮಾಡುವುದಕ್ಕೆ ಇದು ಸೂಕ್ತ ಕಾಲ.
- ತೋಟಗಾರಿಕೆ ಬೆಳೆಗಳಲ್ಲಿ ಇಂಗು ಗುಂಡಿಗಳನ್ನು ತೆಗೆದು ನೀರು ಇಂಗುವಂತೆ ಮಾಡುವುದಕ್ಕೆ ಇದು ಸೂಕ್ತ ಕಾಲ ಇದರಿಂದ ಮಣ್ಣಿನಲ್ಲಿ ತೇವಾಂಶ ಕಾಪಾಡಿಕೊಂಡು ಮಣ್ಣಿನ ಸವಕಳಿ ತಪ್ಪಿಸಿ ಹಾಗು ಮಣ್ಣಿನ ಸಂರಕ್ಷಣೆ ಕಾಪಾಡುತ್ತದೆ.
- ಟೊಮೊಟೊ, ಬೆಂಡೆ, ಹೊಕೋಸು ಇತ್ಯಾದಿ ತರಕಾರಿ ಬೆಳೆಗಳಲ್ಲಿ ವಾತಾವರಣದಲ್ಲಿ ಮೊಡ ಕವಿದ ವಾತಾವರಣದಿಂದ ರಸ ಹೀರುವ ಕೀಟಗಳ ಹಾವಳಿ ಕಂಡುಬಂದಿದ್ದು ಇದರ ಹತೋಟಿಗೆ ಇಮಿಡಾಕ್ಲೊಪ್ರಿಡ್ ಕೀಟನಾಶಕವನ್ನು @ 2 ಮಿ.ಲೀ /ಲೀ ನೀರಿನಲ್ಲಿ ಅಥವಾ ರೋಗರ್ @ 2 ಮಿ.ಲೀ /ಲೀ ನೀರಿನಲ್ಲಿ ಬೆರೆಸಿ ಸಿಂಪಡಿಸಲು ಸೂಚಿಸಲಾಗಿದೆ. ಗಾಳಿಯ ವೇಗವು ಹೆಚ್ಚಿರುವುದರಿಂದ ಮುಂಜಾಗ್ರತ ಕ್ರಮ ವಹಿಸಿ ಸಿಂಪರಣೆ ಮಾಡಿ.
- ಬದನೆಕಾಯಿ : ಕೆಲವು ದಿನಗಳಿಂದ ಮೊಡಕವಿದ ವಾತಾವರಣದಿಂದಾಗಿ ಸುಳಿ ತಿನ್ನುವ ಹುಳುಗಳ ಹಾವಳಿ ಕಂಡುಬಂದಿದ್ದು, ಇದರ ಹತೋಟಿಗೆ ಕ್ಲೊರೊಪೈರಿಫಾಸ್ @ 2 ಮಿ.ಲೀ /ಲೀ ನೀರಿನಲ್ಲಿ ಬೆರೆಸಿ ಸಿಂಪಡಿಸಲು ಸೂಚಿಸಲಾಗಿದೆ.

ನೋಡಲ್ ಅಧಿಕಾರಿ:
ಡಾ.ಎಮ್.ಬಿ. ರಾಜೇಗೌಡ
ಬೆಂಗಳೂರು.